ಅಧ್ಯಕ್ಷರು.— ಮೂಲ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಜಿ. ರಾಜುಗೌಡ — ಮೂಲ ಪ್ರಶ್ನೆಗೆ ಸರಿಯಾದ ಉತ್ತರ ಕೊಟ್ಟಿಲ್ಲ. ಇದಕ್ಕೆ ಸಂಬಂಧ ಪಟ್ಟಂತೆ ಉತ್ತರ ತರಿಸಿಕೊಳ್ಳಲಿ.

ಅಧ್ಯಕ್ಷರು.— ತಾವು ಏತಕ್ಕೆ ಸಿಟ್ಟಿಗೇಳುತ್ತೀರಿ.

ಶ್ರೀ ಜಿ. ರಾಜುಗೌಡ.— ಮಂತ್ರಿಗಳಿಗೆ ಈ ಸಬ್ಜೆಕ್ಟ್ ಹೊಸದು. ರಾಜ್ಯದಲ್ಲಿ ಬೈಪ್ರೋಲ್ಟಿನ್ ರೇಷ್ಮೆಯನ್ನು ಎಷ್ಟು ಪ್ರಮಾಣದಲ್ಲಿ ಉತ್ಪಾದನೆ ಮಾಡಲಾಗುತ್ತಿದೆಯೆಂಬುದನ್ನು ಹೇಳಬೇಕು ? ಟಿ. ನರಸೀಪುರದಲ್ಲಿರುವ ನಿಗಮದ ಘಟಕವನ್ನು ಅಂತರರಾಜ್ಯ ಮಾರುಕಟ್ಟೆಯಲ್ಲಿ ಬೈಪ್ರೋಲ್ಟಿನ್ ರೇಷ್ಮೆಯನ್ನು ಉತ್ಪಾದನೆ ಮಾಡತಕ್ಕ ಉದ್ದೇಶದಿಂದ ಆಧುನಿಕರಣಗೊಳಿಸಲಾಯಿತು. ಆದರೆ ಆ ಉದ್ದೇಶ ನೆರವೇರಿಲ್ಲ. ಇದರಿಂದ ನಮ್ಮ ಹೊಟ್ಟೆ ಉರಿಯುತ್ತಿದೆ.

ಅಧ್ಯಕ್ಷರು.— ತಾವು ಏತಕ್ಕೆ ಸಿಟ್ಟು ಮಾಡಿಕೊಳ್ಳುತ್ತೀರಿ. ತಾಳ್ಮೆಯಿಂದ ಕೇಳಿ.

ಶ್ರೀ ಎ. ಲಕ್ಷ್ಮೀಸಾಗರ್.— ಸ್ವಲ್ಪ ಸಮಾಧಾನವಾಗಿ ಕೇಳಬೇಕು. ಸನ್ಮಾನ್ಯ ರಾಜುಗೌಡರು, ರೇಷ್ಮೆ ಉದ್ಯಮದ ಬಗ್ಗೆ ಅನುಭವದ ಆಧಾರದ ಮೇಲೆ ಸಿದ್ಧಾಂತ ರೂಪವಾಗಿ ಅಧಿಕಾರವಾಣಿಯಿಂದ ಮಾತನಾಡತಕ್ಕಂಥ ಶಕ್ತಿಯನ್ನು ಸಂಪಾದನೆ ಮಾಡಿಕೊಂಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಶಹಭಾಶ್‌ಗಿರಿಯನ್ನು ಕೊಡುತ್ತೇನೆ.

ಶ್ರೀ ಜಿ. ರಾಜುಗೌಡ — ನನಗೆ ಶಹಭಾಶ್‌ಗಿರಿ ಬೇಡ. ಉತ್ತರ ಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.— ಟಿ. ನರಸೀಪುರದ ಘಟಕ ಹೊಸ ಯಂತ್ರೋಪಕರಣಗಳನ್ನು ಉಪಯೋಗಿಸಿಕೊಂಡು ಅವುಗಳಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರಾಟವಾಗುವಂತಹ ರೇಷ್ಮೆಯನ್ನು ಉತ್ಪಾದನೆ ಮಾಡಿ. ರೈತರಿಗೆ ಮತ್ತು ಉದ್ಯಮದಲ್ಲಿರುವವರಿಗೆ ಅನುಕೂಲ ಮಾಡಿ ಕೊಡುವ ಸದುದ್ದೇಶದಿಂದ ಸ್ಥಾಪನೆ ಮಾಡಿದ್ದು, ಅದು ಇವತ್ತು ಧೂಮಕೇತು ಆಗಿದೆ. ಅದರಿಂದ ಎಷ್ಟು ಅನುಕೂಲ ಆಗಬೇಕಾಗಿತ್ತೊ, ಅಷ್ಟು ಆಗಿಲ್ಲ. ಅವರ ವಾದವನ್ನು ನಾನು ಒಪ್ಪಿಕೊಳ್ಳುತ್ತೇನೆ; ಅದು ಪ್ರಾರಂಭವಾಗಿ ಎರಡು ವರ್ಷವಾಗಿದೆ. ಪ್ರೊಡಕ್ಷನ್ ಸ್ಟೇಜಿಗೆ ಬಂದು ೧-೨ ವರ್ಷದಿಂದ ಕೆಲಸ ಮಾಡುತ್ತಿದೆ. ಅದಕ್ಕೆ ಪ್ರಾರಂಭಿಕ ತೊಂದರೆಗಳು ಇತ್ತು.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ.— ಪ್ರಾರಂಭವಾಗಿ ಎರಡು ವರ್ಷ ಆಗಿದೆ, ಪ್ರಾರಂಭಿಕ ತೊಂದರೆ ಅಂದರೆ ಹೇಗೆ ? ನೀವು ಅಧಿಕಾರಕ್ಕೆ ಬಂದು ೫ ವರ್ಷವಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.— ಇದು ಪ್ರೊಡಕ್ಷನ್ನಿಗೆ ಬಂದಿದ್ದು ಇತ್ತೀಚೆಗೆ. ಅವರ ಮನಸ್ಸಿನ ವ್ಯಾಕುಲತೆ ಏನು ಎಂದರೆ ಅದು ನಷ್ಟ ಅನುಭವಿಸುತ್ತಿದೆ. ರೈತರಿಗೆ ಆಗಬೇಕಾದ ಅನುಕೂಲವಾಗಿಲ್ಲ ಎಂಬುದು ಅವರ ವಾದವನ್ನು ಒಪ್ಪಿಕೊಳ್ಳುತ್ತೇನೆ. ಆಗಿರತಕ್ಕ ಲೋಪದೋಷಗಳನ್ನು ತಿದ್ದಿ ಯಾವ ಉದ್ದೇಶಕ್ಕೋಸ್ಕರ ಇದು ಸ್ಥಾಪನೆ ಆಯಿತೊ, ಆ ಉದ್ದೇಶ ಪರಿಪೂರ್ಣವಾಗುವುದಕ್ಕೆ ಎಲ್ಲ ಪ್ರಯತ್ನವನ್ನೂ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ನಾನು ರಾಜುಗೌಡರಿಗೆ ಕೊಡುತ್ತೇನೆ.

ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ನಿರ್ದೇಶನದ ಮತ್ತು ಅಭಿವೃದ್ಧಿ ನಿಗಮದ ಶೇರು ವಿಲೇವಾರಿ ಬಗ್ಗೆ

೧೧೬೯. ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).— ಮಾನ್ಯ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಸ್ವಾಮ್ಯದ ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮವು ತಾನು ಹಣ ಹೂಡಿರುವ ಎಷ್ಟು ಕಂಪನಿಗಳಲ್ಲಿ ಶೇರು ವಿಲೇವಾರಿ ಮಾಡಿದಂತೆ ವಿವಿಧ ಹಣಕಾಸು ಸಂಸ್ಥೆಗಳಿಗೆ ನಿರ್ದೇಶನ ನೀಡಿದೆ. (ಪ್ರತಿ ಸಂಸ್ಥೆಯ ಪ್ರತ್ಯೇಕ ವಿವರಗಳನ್ನು ತಿಳಿಸುವುದು)

ಆ) ಈ ಸಂಸ್ಥೆಗಳಲ್ಲಿ ಕೆ.ಎಸ್.ಐ.ಐ.ಡಿ.ಸಿ. ಹೂಡಿರುವ ಹಣದ ಮೊತ್ತವೆಷ್ಟು ?

೫) ಈ ಸಂಸ್ಥೆಗಳು ರೋಗಗ್ರಸ್ಥವಾಗಲು ಕಾರಣಗಳೇನು ?

ಶ್ರೀ ಜೆ. ಹೆಚ್. ಪಟೇಲ್. (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ನಿಗಮವು ನೆರವು ನೀಡಿರುವ ಎಲ್ಲಾ ಘಟಕಗಳಲ್ಲಿ ಪ್ರವರ್ತಕರು ಶೇರು ವಿಲೇವಾರಿ ಮಾಡದೆ ಇರುವ ಬಗ್ಗೆ ಭರವಸೆಯನ್ನು ಪಡೆಯುತ್ತದೆ. ಆದರೆ ನಿಗಮವು ಬೇರೆ ಹಣಕಾಸು ಸಂಸ್ಥೆಗಳು ಷೇರು ವಿಲೇವಾರಿ ಮಾಡದಂತೆ ಯಾವುದೇ ನಿರ್ದೇಶನವನ್ನು ನೀಡಲು ಸಾಧ್ಯವಿಲ್ಲ.

ಆ) ನಿಗಮವು ೩೧ನೇ ಮಾರ್ಚ್ ೧೯೮೮ ಅವಧಿಯವರೆಗೆ ರೂ. ೧೦೪.೩೭ ಕೋಟಿ ದೀರ್ಘಾವಧಿ ಸಾಲವನ್ನು ಮತ್ತು ರೂ. ೨೦.೧೮ ಕೋಟಿ ಷೇರು ಬಂಡವಾಳವಾಗಿಯೂ ವಿವಿಧ ಘಟಕಗಳಿಗೆ ನೀಡಿರುತ್ತದೆ.

ಇ) ಕೈಗಾರಿಕಾ ಘಟಕಗಳು ರೋಗಗ್ರಸ್ಥವಾಗಲು ಅನೇಕ ಕಾರಣಗಳಿವೆ, ಅವುಗಳಲ್ಲಿ ಕೆಲವು.—

೧) ಸಂಸ್ಥೆಗಳನ್ನು ಆರಂಭಿಸುವಾಗ ಎದುರಾಗುವ ಹಲವಾರು ಅಡಚಣೆಗಳು (ಇನಿಷಿಯಲ್ ಟೇಥಿಂಗ್ ಪ್ರಾಬ್ಲಮ್)

೨) ಅವಶ್ಯಕತೆಗಿಂತ ಹೆಚ್ಚಿನ ಉತ್ಪಾದನೆ ಅಥವಾ ನಿರೀಕ್ಷಿತ ಪ್ರತಿಫಲ ದೊರಕದಿರುವುದು.

೩) ಟಿಕ್ನಾಲಜಿ ವರ್ಗಾವಣೆಯಲ್ಲಿ ತೊಂದರೆ.

೪) ಅಗತ್ಯ ಸವಲತ್ತುಗಳಾದ ಕಚ್ಚಾ ವಸ್ತುಗಳು, ಉಪಯೋಗಿಸಲು ಯೋಗ್ಯವಾದ ಭಾಗಗಳು, ವಿದ್ಯುಚ್ಛಕ್ತಿ ಮುಂತಾದವು ದೊರಕದಿರುವುದು.

೫) ಸಕಾಲದಲ್ಲಿ ಸಾಕಷ್ಟು ಧನ ಸಹಾಯ ದೊರಕದಿರುವುದು.

೬) ತರಬೇತಿ ಹಾಗೂ ಅನುಭವವಿರುವ ಸಿಬ್ಬಂದಿ ವರ್ಗದವರ ಕೊರತೆ.

೭) ಕಾರ್ಮಿಕರ ಅಶಾಂತಿ.

೮) ಆಡಳಿತ ವರ್ಗದ ವಿಫಲತೆ.

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ.— ಎಷ್ಟು ಕಂಪನಿಗಳು ನಷ್ಟದಲ್ಲಿವೆ? ರೋಗ ಗ್ರಸ್ಥ ಯೂನಿಟ್‌ಗಳು ಎಷ್ಟು ಇವೆ? ಇವುಗಳನ್ನು ಸರಿಪಡಿಸಲಿಕ್ಕೆ ಏನು ಕ್ರಮ ಕೈಗೊಂಡಿದ್ದೀರಿ?

ಶ್ರೀ ಎಂ. ರಘುಪತಿ (ಜೆ. ಹೆಚ್. ಪಟೇಲರ ಪರವಾಗಿ).— ಮಾನ್ಯ ಅಧ್ಯಕ್ಷರೇ. ರೋಗಗ್ರಸ್ಥ ಘಟಕಗಳು ೧೮ ಇವೆ. ಅವುಗಳ ಬಗ್ಗೆ ಮಾಹಿತಿ ತರಿಸಿಕೊಡುತ್ತೇನೆ, ೨೯ ಘಟಕಗಳಿಗೆ ಹಣವನ್ನು ನೀಡಿದ್ದೇವೆ. ಅದಕ್ಕೆ ಕಾರಣ ಏನು ಎನ್ನುವುದನ್ನು ಈಗಾಗಲೇ ಹೇಳಿದ್ದೇನೆ. ಇದನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆ. ಜೊತೆಗೆ ಕೈಗಾರಿಕಾ ಘಟಕಗಳವರು ಸಹ ಪ್ರಯತ್ನ ಮಾಡಬೇಕಾಗುತ್ತದೆ-

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.— ನಷ್ಟದಲ್ಲಿ ನಡೆಯುವಂಥ ಯಾವುದಾದರೂ ಘಟಕಗಳು ಮುಚ್ಚಿವೆಯೆ ? ನಿಗಮವು ಷೇರು ವಿಲೇವಾರಿ ಮಾಡದಂತೆ ನಿರ್ದೇಶನ ಕೊಟ್ಟಿಲ್ಲವೆಂದು ತಿಳಿಸಿದ್ದೀರಿ. ಆದರೆ, ವರದಿಯಲ್ಲಿ ರಾಷ್ಟ್ರೀಯ ಹಣಕಾಸಿನ ನಿಗಮವು ನಿರ್ದೇಶನ ಕೊಟ್ಟಿರುವುದನ್ನು ಕಾಣಿಸಿದ್ದೀರಿ. ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು.

ಶ್ರೀ ಎಂ. ರಘುಪತಿ.— ಮಾನ್ಯ ಅಧ್ಯಕ್ಷರೆ, ಭಾರತ ಸರ್ಕಾರದವರು, ಬೋರ್ಡ್ ಆಫ್ ಇಂಡಸ್ಟ್ರೀಸ್ ಮತ್ತು ಫೈನಾನ್ಸಿಯಲ್ ಕನ್‌ಸ್ಟ್ರಕ್ಷನ್ ಸಂಸ್ಥೆಯನ್ನು ಸ್ಥಾಪನೆ ಮಾಡಿದ ಮೇಲೆ ಅವರೂ ಹಲವಾರು ನಿಯಮಗಳನ್ನು ಹಾಕಿದ್ದಾರೆ. ಒಂದು ಘಟಕ ಮುಚ್ಚಬೇಕಾದರೆ ಅದು ಪ್ರಾರಂಭವಾಗಿ ೭ ವರ್ಷವಾಗಿರಬೇಕು. ಎರಡು ವರ್ಷಗಳ ಕಾಲ ಸತತವಾಗಿ ಕ್ಯಾಷ್ ಲಾಸ್ ಆಗಿರಬೇಕು. ಹೀಗೆ ನಿಬಂಧನೆಗಳನ್ನು ಹಾಕಿದ್ದಾರೆ. ಯಾವ ಘಟಕಗಳು ನಿಬಂಧನೆಗಳನ್ನು ಪೂರೈಸಿಲ್ಲ ಅವುಗಳನ್ನು ತಿಳಿಸುತ್ತೇವೆ. ಇಂಥವರಿಗೆ ಕೊಡಿ ಎಂದು ನಾವು ಹೇಳುವುದಿಲ್ಲ. ಯಾವ ಘಟಕಗಳು ಮುಚ್ಚಿವೆ ಎಂದು ಕೇಳಿದ್ದಾರೆ. ವಿವರ ತರಿಸಿಕೊಡುತ್ತೇನೆ.

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ.— ಸಂಸ್ಥೆಗಳು ರೋಗಗ್ರಸ್ಥವಾಗುವುದಕ್ಕೆ ೮ ಕಾರಣಗಳನ್ನು ಕೊಟ್ಟಿದ್ದೀರಿ. ಇಷ್ಟಾದರೂ ಕೂಡ ಮತ್ತೆ ಫೈನಾನ್ಸ್ ಏತಕ್ಕೆ ಮಾಡುತ್ತೀರಿ ? ಸಿಕ್ ಯೂನಿಟ್ ಇದ್ದರೂ ಕೂಡ ಮತ್ತೆ ಹಣ ಕೊಡುವಂತಹ ಉದ್ದೇಶ ಏನು ? ಇವುಗಳ ಸುಧಾರಣೆಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ರಘುಪತಿ.— ಇವುಗಳ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ. ತರಬೇತಿ ಕೊಡುತ್ತಿದ್ದೇವೆ. ಸಲಹೆ ಕೊಡುತ್ತಿದ್ದೇವೆ. ರಾಜ್ಯದ ಹಿತದೃಷ್ಟಿಯಿಂದ, ಬಂಡವಾಳಗಾರರ ಹಿತ ದೃಷ್ಟಿಯಿಂದ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಆದಷ್ಟು ಸಹಾಯ ಮಾಡಿಂತಿದ್ದೇವೆ. ಇಷ್ಟೆಲ್ಲಾ ಮಾಡಿ ಮತ್ತೆ ತೊಂದರೆಗೆ ಒಳಗಾದರೆ, ಅಂತಹದ್ದನ್ನು ಮುಚ್ಚುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.— ಮಂತ್ರಿಗಳು ಹಾರಿಕೆ ಉತ್ತರ ಕೊಟ್ಟಿದ್ದಾರೆ.

ಮೈಸೂರು ಕಾಗದದ ಕಾರ್ಖಾನೆ ಬಗ್ಗೆ

೧೪೩೭. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು)—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭದ್ರಾವತಿಯಲ್ಲಿರುವ ಪೇಪರ್ ಮಿಲ್‌ಗೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಹಾಕಿರುವ ಒಟ್ಟು ಬಂಡವಾಳದ ಪೊತ್ತವೆಷ್ಟು ?

ಆ) ಸದರಿ ಉದ್ಯಮದಿಂದ ೧೯೫೫-೫೬, ೧೯೫೬-೫೭, ೧೯೫೭-೫೮ ತಹಲ್‌ವರೆಗೆ ಬಂದಿರುವ ಲಾಭ ಹಾಗೂ ನಷ್ಟವೆಷ್ಟು ?

ಇ) ಈ ಉದ್ಯಮದ ಸ್ಥಿತಿಗತಿಗಳನ್ನು ಸರಿಪಡಿಸಲು ಸರ್ಕಾರವು ಕೈಗೊಂಡಿರುವ ಯೋಜನೆಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಬೃಹತ್ ಮತ್ತು ಮಧ್ಯಮ ಹಾಗೂ ವಿದ್ಯುಚ್ಛಕ್ತಿ ಸಚಿವರು)—

ಅ) ರಾಜ್ಯ ಸರ್ಕಾರ ಹೂಡಿರುವ ಬಂಡವಾಳ —ರೂ. ೪೧,೯೯,೯೯,೨೩೦,೯೦೦.
ಕೇಂದ್ರ ಸರ್ಕಾರ ಹೂಡಿರುವ ಬಂಡವಾಳ—ಇಲ್ಲ.

ಆ) ಲಾಭ/ನಷ್ಟದ ವಿವರ ಈ ಕೆಳಗಿನಂತಿದೆ.

	ಲಾಭ	ನಷ್ಟ
	(ಲಕ್ಷ ರೂ.ಗಳಲ್ಲಿ)	
೧೯೫೫-೫೬	೪೨೭.೦೮ (ಸವಕಳಿ ಒದಗಿಸುವ ಮುನ್ನ)	...
೧೯೫೬-೫೭	೩೫೦.೭೩ (ಸವಕಳಿ ಒದಗಿಸಿಂವ ಮುನ್ನ)	...
೧೯೫೭-೫೮	ಲೆಕ್ಕ ಪತ್ರದ ಪರಿಶೋಧನೆಯ ಕೆಲಸ ಇನ್ನೂ ಮುಗಿದಿಲ್ಲ.	

ಇ) ಸರ್ಕಾರವು ಈ ಕೆಳಗಿನ ಕ್ರಮಂ ಕೈಗೊಳ್ಳಲು ಯೋಚಿಸಿದೆ.—

೧. ಕಂಪನಿಯ ಬಂಡವಾಳ ಹೂಡಿಕೆಯ ವಿಚಾರವನ್ನು ಪುನರ್ ವಿಮರ್ಶಿಸಿ ಸಾಲದ ಒಂದು ಭಾಗವನ್ನು ಮತ್ತು ಈಗಾಗಲೇ ಕೊಡಬೇಕಾಗಿರುವ ಬಡ್ಡಿಯನ್ನು ಈಕ್ವಿಟಿ ಬಂಡವಾಳವಾಗಿ ಪರಿವರ್ತಿಸುವುದಲ್ಲದೆ ಬಾಕಿ ಇರುವ ಬಡ್ಡಿಯನ್ನು ಕೈಬಿಡಲಾಗುವುದು.

೨. ಅವಧಿ ಸಾಲ ಮತ್ತು ವ್ಯವಹಾರಿಕ ಬಂಡವಾಳದ ಮೇಲಿನ ಬಡ್ಡಿಯನ್ನು ಕಡಿಮೆ ಮಾಡುವುದು.